ಡಾ: ಹೆಚ್.ಸಿ. ಮಹದೇವಪ್ಪ : ನೀವೇ, ನಾನೇನು ತಪ್ಪು ಮಾಡಿದೆ, ಕಾರಣ ಕೊಡಿ ಎಂದು ಕೇಳಿದ್ದೀರಿ. ನಿಮ್ಮ ಪರವಾಗಿ ಇದ್ದೆವು.

7) **ವಿಷಯ : ಚೌಂಡಾಪೂರ–ಹೊಸೂರು ಪಟ್ಟಣ–ದೇವಗಾಲ ಣಗಾಪೂರ ಹಾಗೂ ಘತ್ತರಗಾ–ಧುದನಿ (ಮಹಾರಾಷ್ಟ್ರ ಗಡಿಯವರೆಗೆ) ರಸ್ತೆಯ ತುಂಬಾ ಹಾಳಾಗಿದ್ದು, ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವು ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದು ಶೀಘ್ರದಲ್ಲಿಯೇ 3 ರಸ್ತೆಗಳ ಸುಧಾರಣೆ ಕಾಮಗಾರಿ ಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ.**

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಅಫ಼ಜಲಪುರ) : ಮಾನ್ಯ ಅಧ್ಯಕ್ಷರೆ, ಚೌಂಡಾಪೂರ–ಹೊಸೂರು ಪಟ್ಟಣ–ದೇವಲಗಾಣಗಾಪೂರ ಹಾಗೂ ಘತ್ತರಗಾ–ಧುದನಿ(ಮಹಾರಾಷ್ಟ್ರ ಗಡಿಯವರೆಗೆ) ರಸ್ತೆಗಳು ತುಂಬಾ ಹಾಳಾಗಿದ್ದು, ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದು ಶೀಘ್ರದಲ್ಲಿಯೇ 3 ರಸ್ತೆಗಳ ಸುಧಾರಣೆ ಕಾಮಗಾರಿ ಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ,

ಚೌಡಾಪುರ–ಹೊಸೂರು ಹಾಗೂ ಘತ್ತರಗಾ–ಧುದನಿ (ಮಹಾರಾಷ್ಟ್ರ ಗಡಿಯವರೆಗೆ) ರಸ್ತೆಗಳು ರಾಜ್ಯ ಹೆದ್ದಾರಿಗಳಾಗಿದ್ದು ಪಟ್ಟಣ – ದೇವಲಗಾ ಣಾಗಾಪೂರ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಸದರಿ ರಸ್ತೆಗಳು ಸಾರ್ವಜನಿಕ ಸಂಚಾರಕ್ಕೆ ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ರಸ್ತೆಗಳ ಸುಧಾರಣೆಗಾಗಿ 2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿಗಳ : ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಅಡಿಯಲ್ಲಿ ಈ ರಸ್ತೆಗಳ ಮೇಲಿನ ತಗ್ಗುಗುಂಡಿಗಳನ್ನು ಮುಚ್ಚುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಶೀಘ್ರವಾಗಿ ಸಂಚಾರಕ್ಕೆ ಯೋಗ್ಯ

ಗೊಳಿಸಲಾಗುವುದು. ಅಲ್ಲದೇ ಸುಕ್ಷೇತ್ರ ಗಾಣಗಾಪೂರ ಹಾಗೂ ಸನ್ನತಿ ಕ್ಷೇತ್ರಗಳ ಕೂಡು ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಲೆಕ್ಕ ಶೀರ್ಷಿಕೆ 3054 ಅಡಿ ರೂ.3.00 ಕೋಟಿ ಅನುದಾನ ಬಿಡುಗಡೆಯಾಗಿದ್ದು ಈ ಅನುದಾನದ ಅಡಿಯಲ್ಲಿ ಈ ಕೆಳಕಂಡ 4 ರಸ್ತೆ ಸುಧಾರಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ:

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	ಚೌಡಾಪೂರ – ಹೊಸೂರು ರಾಜ್ಯ ಹೆದ್ದಾರಿ – 22 ರಸ್ತೆ ಸುಧಾರಣೆ (ಕಿಮೀ 55.00 ರಿಂದ 99.80ರ ವರೆಗೆ)	19.00
2.	ಘತ್ತರಗಾ – ಧುದನಿ (ಮಹಾರಾಷ್ಟ್ರ ಗಡಿವರೆಗೆ) ರಾಜ್ಯ ಹೆದ್ದಾರಿ – 124 ರಸ್ತೆ ಸುಧಾರಣೆ (ಕಿಮೀ 81.00 ರಿಂದ 95.00 ರ ವರೆಗೆ)	30.00
3.	ಪಟ್ಟಣ – ದೇವಲಗಾಣಗಾಪೂರ ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ (ಕಿಮೀ 7.75 ರಿಂದ 29.00 ಹಾಗೂ 33.80 ರಿಂದ 37.80 ರ ವರೆಗೆ)	69.00
4.	ಅಫಜಲ್‌ಪುರ್ – ಗಾಣಾಗಾಪೂರ್ ಎಂಡಿಆರ್ ರಸ್ತೆಯ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ	19.00
	ಒಟ್ಟು	**137.00**

ಮೇಲೆ ತಿಳಿಸಿರುವ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿದ್ದು ಸದರಿ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ ರಸ್ತೆಗಳನ್ನು ಸುಕ್ಷೇತ್ರ ಗಳಿಗೆ ಬಂದು ಹೋಗುವ ಯಾತ್ರಾರ್ಥಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ಯೋಗ್ಯವಾಗಿರಿಸಲು ಕ್ರಮ ಕೈಗೊಳ್ಳಲಾಗುವುದು.

ಪಟ್ಟಣ . – ದೇವಲಗಾಣಗಾಪೂರ ರಸ್ತೆ ಕಿಮೀ 0.00 ರಿಂದ 15.00ರ ವರೆಗಿನ ರಸ್ತೆ ಅಭಿವೃದ್ಧಿಯನ್ನು ಅಪೆಂಡಿಕ್ಸ್ –ಇ ನಲ್ಲಿ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಘತ್ತರಗಾ – ಧುದನಿ (ಮಹರಾಷ್ಟ್ರ ಗಡಿಯವರೆಗೆ) ರಾಜ್ಯ ಹೆದ್ದಾರಿಯನ್ನು ಲೆಕ್ಕ ಶೀರ್ಷಿಕೆ 3054 ಮತ್ತು 13ನೇ ಹಣಕಾಸು ಯೋಜನೆ ಅಡಿಯಲ್ಲಿ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಚೌಡಾಪೂರ – ಹೊಸೂರು ರಸ್ತೆಯ ಆಯ್ದ ಭಾಗಗಳಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ 180.00 ಲಕ್ಷಗಳ ಅಂದಾಜಿನಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದಲ್ಲದೆ, ಚೌಡಾ ಪೂರ – ಹೊಸೂರ ರಸ್ತೆಯು ಗುಲಬರ್ಗಾ – ಹೊಸೂರು ರಾಜ್ಯ ಹೆದ್ದರಿ –22 ರ ಭಾಗವಾಗಿದ್ದು ಕಿಮೀ 33.00 ರಿಂದ 58.15ರ ವರೆಗೆ (ಪ್ಯಾಕೇಜ್–2) 18.17 ಕೋಟಿ ಅಭಿವೃದ್ಧಿ ಕಾಮಗಾರಿಯನ್ನು ಹಾಗೂ ಸದರಿ ರಾಜ್ಯ ಹೆದ್ದಾರಿ ಕಿಮೀ 58.15 ರಿಂದ 99.80ರ ವರೆಗೆ (ಪ್ಯಾಕೇಜ್–3) 21.94 ಕೋಟಿ ಅಭಿವೃದ್ಧಿ ಸುಧಾರಣೆಗಾಗಿ ಯೋಜನಾ ವರದಿ ತಯಾರಿಸಿದ್ದು, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಲ್ಲಿ ಅನುದಾನದ ಲಭ್ಯತೆಯ ಆಧಾರದ ಮೇರೆಗೆ ಅಗತ್ಯ ಕ್ರಮಕೈಗೊಳ್ಳಲಾಗುವುದು.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಮಾನ್ಯ ಸಚಿವರು ನೀಡಿರುವ ಉತ್ತರ ನನಗೆ ತೃಪ್ತಿಕರವಾಗಿಲ್ಲ. ಚೌಂಡಾಪೂರ–ಹೊಸೂರು ರಸ್ತೆ ಸುಮಾರು 67 ಕಿ.ಮೀ. ಇದೆ. ಸನ್ಮಾನ್ಯ ಮುಖ್ಯಮಂತ್ರಿಯವರು ಹೈದರಾಬಾದ್ ವಿಮೋಚನೆ ದಿನಾಚರಣೆಗೆ ಬಂದಾಗ ಆ ರಸ್ತೆಯ ಪರಿಸ್ಥಿತಿ ನೋಡಿ 2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಘೋಷಣೆ ಮಾಡಿದ್ದರು. ಆದರೆ, ಇಲ್ಲಿಯವರೆಗೆ ಒಂದು ಪೈಸೆ ಸಹ ಕೊಟ್ಟಿಲ್ಲ. ಆಮೇಲೆ, ಘತ್ತರಗಾ–ಧುದನಿ ರಸ್ತೆಗೂ ಸಹ ಕೊಟ್ಟಿಲ್ಲ. ಇದರ ಬಗ್ಗೆ 2010ರಲ್ಲಿ ಮಾಡಿರುವ ಬಗ್ಗೆ ಮಾನ್ಯ ಸಚಿವರು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಪಟ್ಟಣ– ದೇವಲಗಾಣಗಾಪೂರ ಕೂಡ ಪ್ರಸಿದ್ಧ ದೇವಸ್ಥಾನದ ರಸ್ತೆ. ಅದು ಕೂಡ ಬಹಳ ದುಸ್ಥಿತಿಯಲ್ಲಿದೆ. ಅದರ 4 ಕಾಮಗಾರಿಗಳನ್ನು

Appendixನಲ್ಲಿ ವಿಶೇಷ ಅನುದಾನ ಕೊಟ್ಟು, ತೀವ್ರಗತಿಯಲ್ಲಿ ಟೆಂಡರ್ ಕರೆದು ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಚೌಡಾಪುರ – ಹೊಸೂರು ರಸ್ತೆ ಕಾಮಗಾರಿಗಾಗಿ 7 ಕೋಟಿ 50 ಲಕ್ಷ ರೂಪಾಯಿಗಳಿಗೆ ಅನುಮೋದನೆ ಕೊಟ್ಟಿದ್ದು, ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡುವ ಕೆಲಸ ಮಾಡುತ್ತೇವೆ. 7 ರಿಂದ 15 ಕಿ.ಮೀ. ರಸ್ತೆಗೆ ಸಹ 6 ಕೋಟಿ ರೂಪಾಯಿ ಲಭ್ಯವಾಗುತ್ತದೆನ್ನುವುದನ್ನು ಸಹ ಹೇಳಬಯಸುತ್ತೇನೆ. ಅತಿ ಶೀಘ್ರದಲ್ಲಿ ಕೆಲಸ ಮಾಡಿಸುತ್ತೇನೆ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ : ಅದರ maintenance ಗೆ ಹಣ ಕೊಡಬೇಕು. ಸನ್ಮಾನ್ಯ ಮುಖ್ಯಮಂತ್ರಿಯವರು 2 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದರು. Maintenance ಗೆ ಬಹಳ ತುರ್ತಾಗಿ ಬೇಕಾಗಿದೆ. ಟೆಂಡರ್ ಕರೆದರೆ ಅದಕ್ಕೆ 2 ತಿಂಗಳ ಪ್ರಕ್ರಿಯೆ ಹಿಡಿಯುತ್ತದೆ.

ಅಧ್ಯಕ್ಷರು : Maintenance ಮಾಡುವುದಕ್ಕೆ ಹೇಳಿ.

ಶ್ರೀ ಮಾಲೀಕಯ್ಯ ಏ.ಗುತ್ತೇದಾರ್ : ಆ ರಸ್ತೆ ಬಹಳ ಅಸ್ತವ್ಯಸ್ತವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿದ್ದಾರೆ. ತಾವೇ ಹೈದರಾಬಾದ್ ವಿಮೋಚನೆ ದಿವಸ ಘೋಷಣೆ ಮಾಡಿದ್ದಿರಿ.

ಶ್ರೀ ಸಿ.ಎಂ. ಉದಾಸಿ : ಟೆಂಡರ್ ಆಗುವವರೆಗೆ ರಸ್ತೆಯನ್ನು motorable ಮಾಡಿ ಇಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ : ಧನ್ಯವಾದಗಳು.

8) ವಿಷಯ : ಹಾಸನ ಜಿಲ್ಲೆಯ ಬೇಲೂರು ಹೊಳೆನರಸೀಪುರ ಪಾಲಿಟೆಕ್ನಿಕ್ ಕಾಲೇಜಿನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಹಣ ಬಿಡುಗಡೆ ಮಾಡದಿರುವುದರಿಂದ ಕಾಲೇಜಿಗೆ ಬೇಕಾದ ಮೂಲಭೂತ ಸೌಕರ್ಯಗಳು ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ.